ಅನ್ನುತ್ತಿದ್ದರು. ಈಗ ಈ ಮನುಷ್ಯರಿಗೆ ಈ ಜಡ್ಡುಗಳೆಲ್ಲ ಯಾಕಂತೀರಿ? ಹಸಿರು ಗಿಡಗಳನ್ನು ಮುಟ್ಟದೆ ಇರುವುದರಿಂದ ಎಂದು ನನ್ನನ್ನು ಓಲೈಸುತ್ತ ನನ್ನ ಕೈ ಹಿಡಿದುಕೊಂಡು ಗಿಡಗಳ ನಡುವೆ ಕರೆದೊಯ್ಯುತ್ತಿದ್ದರು.

ಹಾಗೆ ನಮ್ಮಪ್ಪನ ಜೀವನ ಹೂಗಳೊಂದಿಗೆ ಹಸಿರಿನೊಂದಿಗೆ ಮನಸನ್ನು ಮುದಗೊಳಿಸುವ ಸಂಗೀತದೊಂದಿಗೆ ಹಾಯಾಗಿ ಪ್ರಶಾಂತವಾಗಿ ಕಳೆದುಹೋಯಿತು.

ಈಗ ನಾನು ಊಹಿಸಬಲ್ಲೆ – ಅವೆಲ್ಲ ಇಲ್ಲದಿದ್ದರೆ ಅವರು ಏನಾಗುತ್ತಿದ್ದರೋ. ಡಾಕ್ಟರಾಗಿ ತನಗೆ ಆಗುತ್ತಿದ್ದ ಅಸಂತೃಪ್ತಿಯನ್ನು ಹೇಗೆ ಸಹಿಸಿಕೊಳ್ಳಲಾಗುತ್ತಿರಲಿಲ್ಲವೋ. ಬದುಕಿರುವಷ್ಟು ಕಾಲ ಅವರಿಗೆ ಅವಮಾನಗಳು ತಪ್ಪಲಿಲ್ಲ. ಅವರ ನಂತರ ನಮ್ಮೂರಿಗೆ ಬಂದ ಹೊಸ ಡಾಕ್ಟರುಗಳು ಅವರನ್ನು ಡಾಕ್ಟರೆಂದೇ ಗುರುತಿಸಲಿಲ್ಲ. ಏಕೆಂದರೆ ಅವರು ಎಂಬಿಬಿಎಸ್ ಮಾಡಿರಲಿಲ್ಲ. ಮೇಲ್ಜಾತಿಯ ಡಾಕ್ಟರುಗಳಾದರೆ ತಮಗೆ ಸರಿಸಮನಾಗಿ ಅವರಿಗೆ ಸ್ಥಾನ ಕೊಡಲಿಲ್ಲ. ಏಕೆಂದರೆ ಅವರು ಮೇಲ್ಜಾತಿಯವರಲ್ಲ. ಇದೆಲ್ಲ ಕಣ್ಣಿಗೆ ಕಾಣಿಸದ ನೋವು.

ಇನ್ನು ಕಣ್ಣಿಗೆ ಎದ್ದು ಕಾಣಿಸುತ್ತಿದ್ದ ನೋವೂ ಒಂದಿತ್ತು. ಅದು ನಮ್ಮಮ್ಮ. ದಿನಾ ಸಂಜೆಯಾದರೆ ಸಾಕು ಸ್ನಾನ ಮಾಡಿ, ಇಸ್ತ್ರಿ ಮಾಡಿದ ಬಟ್ಟೆ ತೊಟ್ಟು ಮಹಾಲಕ್ಷ್ಮಿಯಂತೆ ನಮ್ಮಪ್ಪನ ಜೊತೆಗೆ ಹಾಸ್ಪಿಟಲ್‌ಗೆ ಹೋಗುತ್ತಿದ್ದ ನಮ್ಮಮ್ಮ ಹಾಗೆ ಇನ್ನು ಕೆಲ ಕಾಲವಷ್ಟೇ ತನ್ನ ಜೊತೆ ಬರುವವಳೆಂದು ಅಪ್ಪನಿಗೆ ಮೊದಲೇ ಗೊತ್ತಿತ್ತು. ನಮ್ಮ ತಂದೆಯ ಮ್ಯಾಜಿಕ್ ಆಕೆಯ ರೋಗವನ್ನು ವಾಸಿಮಾಡಲಾಗಲಿಲ್ಲ. ಅವರು ಹೇಳಿದ ಪಥ್ಯಗಳು ಕೆಲಸಕ್ಕೆ ಬರಲಿಲ್ಲ. ಆದರೂ ಧೈರ್ಯದಿಂದಲೇ ಆಕೆಯ ಅಗಲಿಕೆಯನ್ನು ಎದುರಿಸಿದ. ಆಕೆ ಪ್ರಾಣ ಬಿಡುತ್ತಿರುವಾಗ ಆಕೆಯ ಪಕ್ಕದಲ್ಲಿ ನಿಂತುಕೊಂಡು ಎಷ್ಟು ಚೆಂದಗೆ ನಕ್ಕನೆಂದರೆ ಆ ನಗುವನ್ನೇ ದೀಪವಾಗಿಸಿಕೊಂಡು ಕಣ್ಣು ಮುಚ್ಚಿದಳಾಕೆ.

ಆ ಕಷ್ಟಕಾಲದಲ್ಲಿ ಕೂಡ ನಮ್ಮಪ್ಪನಿಗೆ ಬೆಂಬಲವಾಗಿ ನಿಂತವರು ನಾವಲ್ಲ. ಅವರ ಸಂಗೀತವೇ. ಅವರು ನೀರು ಹಾಕಿ ಬೆಳೆಸಿದ ಗಿಡಗಳೇ. ಅವೇ ಅವರಿಗೆ ಕೊನೆಯವರೆಗೂ ನೆರಳನ್ನಿತ್ತು ದಾಹ ತಣಿಸಿ ಕಳಿಸಿಕೊಟ್ಟವು' ಎಂದು ನಿಲ್ಲಿಸಿದಳಾಕೆ.

ಸ್ವಲ್ಪ ಹೊತ್ತಿನ ನಂತರ ಅಂದಳು:

'ನಿಮಗೆ ಗೊತ್ತಾ ಇವರೆ? ಮೆಡಿಕಲ್ ಓದ್ತಿದ್ದಾಗ ನಾನು ತುಂಬಾ ಚೆನ್ನಾಗಿ ಹಾಡ್ತಿದ್ದೆ. ಈಗ ಎಲ್ಲ ಮರೆತುಬಿಟ್ಟೆ. ನನ್ನ ಗಂಡ ನನಗೆ ಪರಿಚಯವಾಗಿದ್ದೇ ಕಲ್ಚರಲ್ ಪ್ರೋಗ್ರಾಮ್ ಒಂದರಲ್ಲಿ. ಅವರಿಗೆ ಮೃದಂಗ ಗೊತ್ತು. ಸಂಗೀತ ಅವರ ವಂಶದೊಳಗೇ ಇದೆ. ನೀವು ಕೇಳಿಯೇ ಇರ್ತೀರಿ. ಪುದೂರು ದ್ರಾವಿಡರು ಅಂತ... ಅವರು ನಮ್ಮ ಏರಿಯಾದಲ್ಲಿ ಸೆಟ್ಲರ್ಸ್.

ಆದರೆ ಆ ವಂಶದಲ್ಲಿ ಕಲೆ ಎಂದೋ ನಿರ್ನಾಮವಾಗಿ ಹೋಗಿದೆ. ಉದ್ಯೋಗ ಅರಸುತ್ತ ಹೊಟ್ಟೆಪಾಡಿಗಾಗಿ ದೇಶಾಂತರ ವಲಸೆ ಮಾಡುತ್ತ ನಮ್ಮ ಮನೆಯವರು ನಾಶವಾದಂತೆಯೇ ಅವರ ವಂಶದಲ್ಲಿ ಎಲ್ಲರೂ ಬಂಗಾರದಂಥ ಕಲೆಯಿಂದ ದೂರವಾದರು. ಬಹಳ ಬೆಲೆ ಬಾಳುವ ಕಲೆ. ಕೋಟಿಗಟ್ಟಲೆ ಖರ್ಚು ಮಾಡಿದರೂ ಒಬ್ಬರ ಶರೀರದೊಳಗೆ ಬಲವಂತದಿಂದ ತೂರಿಸಲಾಗದ ಕಲೆ. ಆಕ್ಸಿಜನ್‌ನಂಥ ಕಲೆ...'

ಈಗ ಗ್ಲಾಸು ಆಕೆಯ ಅಂಗೈಯಲ್ಲಿ ನಲುಗುತ್ತಿತ್ತು.

ಏನೋ ಆಲೋಚಿಸುತ್ತಿರುವವಳಂತೆ ತಲೆ ಬಗ್ಗಿಸಿ ತನ್ನ ಬೆತ್ತಲೆ ಪಾದಗಳ ಪದೇ ಪದೇ ನೆಲದ ಮೇಲೆ ಒದೆಯುತ್ತಿದ್ದಾಳೆ.